ಓ ಎಸ್ ನಂ 199/2017

ಪಿ. ಡಬ್ಲ್ಯೂ ಃ 3

ದಿಃ 3.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ 6 ರವರ ಪರ ಶ್ರೀ ಜಿ ಪಿ ವಕೀಲರಿಂದ ಃ

ನಾನು 1 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವಿದ್ಯಾಭ್ಯಾಸ ಮಾಡಿರುವುದಕ್ಕೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ನಾನು ಕೇತೋಹಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಕೇತೋಹಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿರುವುದಕ್ಕೆ ಯಾವುದಾದರೂ ದಾಖಲಾತಿಗಳನ್ನು ಪಡೆಯಲು ನಾನು ನೋಡಬೇಕಾಗುತ್ತದೆ.

ನಾನು ಹೆಬ್ಬೂರಿನ ಹತ್ತಿರ ಇರುವ ಮಾಕನಹಳ್ಳಿಯಲ್ಲಿ ವಾಸ ಇದ್ದು, ಅಲ್ಲಿ ನಾನು ಕಂಟ್ರಾಕ್ಟರ್ ಮಾಡಿಸುತ್ತಿವುದಾಗಿ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿದ್ದು ಅದಕ್ಕೆ ಪೂರಕವಾಗಿ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ನೀಡುತ್ತೇನೆ. ನಾನು ಕೇತೋಹಳ್ಳಿಯಲ್ಲಿ ವಾಸವಿದ್ದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ನನ್ನ ಮತದಾರರ ಚೀಟಿ, ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ಮಾಕನಹಳ್ಳಿಯಲ್ಲಿರುತ್ತದೆ ಎಂದರೆ ಸಾಕ್ಷಿ ರೇಷನ್ ಕಾರ್ಡ್ ಕೇತೋಹಳ್ಳಿಯಲ್ಲಿರುತ್ತದೆ, ಆಧಾರ್ ಕಾರ್ಡ್ ಮತ್ತು ಮತದಾರರ ಚೀಟಿ ಮಾಕನಹಳ್ಳಿಯಲ್ಲಿರುತ್ತದೆ ಎಂದು ನುಡಿಯುತ್ತಾರೆ.

ಕೇತೋಹಳ್ಳಿಯಲ್ಲಿ ಜಮೀನು ಇತ್ತು ಮತ್ತು ನಾನು ಅಲ್ಲಿ ವ್ಯವಸಾಯ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ನಾನು ಸ.ನಂ. 52 ರಲ್ಲಿ ಇರುವುದಾಗಿ ತೋರಿಸಲು ಯಾವುದಾದರೂ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಯೋ ಎಂದರೆ ಸಾಕ್ಷಿ ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದದು ನುಡಿಯುತ್ತಾರೆ.

ಮುರಳಿಯಪ್ಪ ನವರು ನಮ್ಮ ಊರಿನವರಾಗಿರುತ್ತಾರೆ. ಅವರು ನನಗೆ ಪರಿಚಯ. ಮುರಳಿಯಪ್ಪ ನವರು ಮತ್ತು ನಾವು ಅನ್ಯೂನ್ಯವಾಗಿ ಇರುತ್ತೇವೆ. ನಾನು ಮತ್ತು ನನ್ನ ಸಹೋದರ ಕುಮಾರಸ್ವಾಮಿರವರ ನಡುವೆ ವಿಭಾಗವಾಗಿರುತ್ತದೆ. ನನ್ನ ಹೆಸರಿಗೆ ನಾನು ವಿಭಾಗ ಆದ ಮೇಲೆ ಯಾವುದೇ ನೋಂದಣಿ ಮಾಡಿಸಿರುವುದಿಲ್ಲ. ಅದಕ್ಕೆ ಕಾರಣ ನಮ್ಮ ತಂದೆ ವಿಲ್ ಒಂದನ್ನು ಬರೆದಿರುತ್ತಾರೆ.

2010 ರ ಹಿಂದೆ ಕೇತೋಹಳ್ಳಿಯಲ್ಲಿ ವಾಸವಾಗಿದ್ದೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಯನ್ನು ಕೊಟ್ಟಿರುವುದಿಲ್ಲ. ನಮ್ಮ ಸ್ವತ್ತಿನಲ್ಲಿ ನಾನು ಮತ್ತು ನನ್ನ ತಮ್ಮ ಜಂಟಿ ಸ್ವಾಧೀನದಲ್ಲಿರುತ್ತೇವೆಂದು ಹೇಳಿರುವ ವಿಷಯ ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಗಳು ಮತ್ತು ಅವರ ಅಣ್ಣ ತಮ್ಮಂದಿರು ಒಟ್ಟಿಗೆ ಇರುತ್ತಾರೆಂದು ನಾನು ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ. ನಾನು ತಾಲ್ಲೂಕು ಕಚೇರಿಗೆ ಹೋಗಿ ಯಾವುದೇ ರೆವಿನ್ಯೂ ದಾಖಲಾತಿಯನ್ನು ಕೂಡ ಪರಿಶೀಲನೆ ಮಾಡಿರುವುದಿಲ್ಲ.

ಹುಲಿಯಪ್ಪ ನವರು ಕಾಳಿಂಗಪ್ಪ ನವರ ಮಗನಾಗಿರುತ್ತಾರೆ. ಲಕ್ಕನಾಯಕನ ಮಗ ಹುಲಿಯಪ್ಪ ಎಂದು ನಾನು ಎಲ್ಲಿಯೂ ಬರೆಯಿಸಿರುವುದಿಲ್ಲ. ಹುಲಿಯಪ್ಪ ನಿಗೆ ಎಷ್ಟು ಜನ ಮಕ್ಕಳೆಂದು ಗೊತ್ತಿಲ್ಲ. ಕಾಳಿಂಗಯ್ಯ ನವರ ತಾತನ ಹೆಸರು ಮತ್ತು ಅಪ್ಪನ ಹೆಸರು ನನಗೆ ಗೊತ್ತಿಲ್ಲ. ಕಾಳಿಂಗಯ್ಯ ನವರ ವಾರಸುದಾರರು 3 ಜನ ಇರುತ್ತಾರೆ. ಅವರ ಮೊದಲನೆ ಮಗ ತೀರಿಕೊಂಡಿರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ, 2ನೆ ಮಗ ಮರುಳಯ್ಯ, 3ನೇಯವರು ವೀರಭದ್ರಯ್ಯ , 4ನೇ ವಾರಸುದಾರ ಸೀತಾರಾಮಯ್ಯ ಇರುತ್ತಾರೆ. ನನಗೆ ಕಾಳಿಂಗಯ್ಯ ನವರ ಹೆಣ್ಣು ಮಕ್ಕಳ ಹೆಸರುಗಳು ಗೊತ್ತಿಲ್ಲ.

ನಿ ಪಿ 64 ನ್ನು ಸಾಕ್ಷಿಗೆ ತೋರಿಸಲಾಗಿ ಮತ್ತು ಸಾಕ್ಷಿಗೆ ಅದರಲ್ಲಿ ಇರುವ ಅಂಶಗಳನ್ನು ಓದಿ ತಿಳಿಸಲಾಗಿ ಸಾಕ್ಷಿಯು ಸದರಿ ನಿ ಪಿ 64 ರಂತೆ ವಿಭಾಗವಾಗಿರಬಹುದು ಎಂದು ನುಡಿಯುತ್ತಾರೆ. ಸದರಿ ನಿ ಪಿ 64 ರಲ್ಲಿ ಕಾಳಿಂಗಯ್ಯ ನವರ ಮಕ್ಕಳಿಗೆ ಆಸ್ತಿಗಳು ವಿಭಜನೆ ಆಗಿರುವ ಹಾಗೇ ಇರುತ್ತದೆ ಎಂದರೆ ಸಾಕ್ಷಿ ಎರಡು ಐಟಂ ಸ್ವತ್ತುಗಳು ವಿಭಜನೆಯಾಗಿರುವುದಿಲ್ಲ, ಆದ್ದರಿಂದ ಈ ದಾವೆಯನ್ನು ಹೂಡಿರುತ್ತೇವೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಜಿ ಪಿ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**